**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.40/2017</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ದಾದಾಖಲಂದರ ಹಬ್ಬೂಸಾಬನವರ | ಸಿಡಬ್ಲ್ಯೂ | 2 |
| ತಂದೆ ಹೆಸರು | ಬಾಬುಸಾಬ | ಪಿಡಬ್ಲ್ಯೂ | 3 |
| ವಯಸ್ಸು | 38 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸಸ್ಥಳ | ಶಿವಲಿಂಗನಗರ, ಹಾವೇರಿ | | |

**<u>ದಿಃ 06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.</u>**

1). ನನಗೆ ಚಾ.ಸಾ-1 ಮತ್ತು 3 ಇವರ ಪರಿಚಯ ಇರುವದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯಲ್ಲಿರುವ ಸಹಿ ತನ್ನದೇ ಎಂದು ಒಪ್ಪಿದ್ದರಿಂದ, ಸದರಿ ದಾಖಲಾತಿಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ನಿ.ಪಿ-3 ದಾಖಲಾತಿಗೆ ಯಾವ ವರ್ಷ ಎಲ್ಲಿ ಸಹಿ ಮಾಡಿದ್ದೇನೆ ಎಂದು ಗೊತ್ತಿರುವದಿಲ್ಲ. ಅದೇ ರೀತಿ ನಿ.ಪಿ-3 ದಾಖಲಾತಿಯನ್ನು ಬರೆಯುುವಾಗ ನನ್ನ ಜೊತೆ ಯಾವ ಯಾವ ವ್ಯಕ್ತಿಗಳು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ನಿ.ಪಿ-3 ದಾಖಲಾತಿ ಏನು ಇರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ ಮತ್ತು ಅದನ್ನು ನಾನು ಓದಿ ನೋಡಿರುವದಿಲ್ಲ.

2) ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಸಾಕ್ಷಿಯು ಸದರಿ ಪೋಟೋವನ್ನು ಹಾವೇರಿಯ ತಹಶೀಲ್ದಾರ ಕಛೇರಿಯಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಟೋ ಈಗಗಲೇ ನಿ.ಪಿ-2 ಎಂದು ಗುರುತಿಸಲಾಗಿರುತ್ತದೆ. ನಿ.ಪಿ-2 ಪೋಟೋ ಮನೆಯ ಜಾಗೆಯ ವ್ಯಾಜ್ಯದ ಕುರಿತಾಗಿ ತೆಗೆಯಲಾಗಿರುತ್ತದೆ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯಲ್ಲಿರುವ ಸಹಿ ತನ್ನದೇ ಎಂದು ಒಪ್ಪಿದ್ದರಿಂದ, ಸದರಿ ದಾಖಲಾತಿಯು ಜಪ್ತು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ನಿ.ಪಿ-4 ದಾಖಲಾತಿಗೆ ನಾನು ಸಹಿ ಮಾಡುವಾಗ ನನ್ನ ಜೊತೆ ಯಾವ ಯಾವ ವ್ಯಕ್ತಿಗಳು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿರುವದಿಲ್ಲ. ನಿ.ಪಿ-4 ಜಪ್ತು ಪಂಚನಾಮೆ ಮಾಡುವಾಗ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**

3) ನನಗೆ ನಿ.ಪಿ-3 ದಾಖಲಾತಿಯಲ್ಲಿ ಬರೆದಿರುವ ಎಲ್ಲ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳು ಳಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ-3 ಜರುಗಿಸುವಾಗ ನಿ.ಪಿ-2 ಪೋಟೋ ತೆಗೆದಿರುತ್ತಾರೆ ಮತ್ತು ಆ ಕುರಿತಾಗಿ ನನಗೆ ಸಂಪೂರ್ಣ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4) ಅದೇ ರೀತಿ ನನ್ನ ಹಾಗೂ ಚಾ.ಸಾ-4 ಇವರ ಸಮಕ್ಷಮ ಪೊಲೀಸರು ಪೊಲೀಸ ಠಾಣೆಯಲ್ಲಿ ಇಬ್ಬರೂ ಆರೋಪಿಗಳನ್ನು ಕರೆಯಿಸಿ ಮಾದರಿ ಸಹಿಗಳನ್ನು ನನ್ನ ಸಮಕ್ಷಮ ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ಜರುಗಿಸಲಾದ ನಿ.ಪಿ-4 ಜಪ್ತು ಪಂಚನಾಮೆಗೆ ನಾನು ಮತ್ತು ಚಾ.ಸಾ-4 ಇಬ್ಬರೂ ಸಹಿ ಮಾಡಿದ್ದೇವೆ ಅಂದರೆ ಸರಿಯಲ್ಲ. ನಿ.ಪಿ-2 ರಿಂದ 4 ದಾಖಲಾತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.